ಶ್ರೀ ಎಚ್. ಬಿ. ಜ್ವಾಲನಯ್ಯ.—ಕುದುರೆಮುಖ ಅದುರನ್ನು ಹೆಚ್ಚಾಗಿ ಕೊಳ್ಳುವಂಥವರು ಜಪಾನಿನವರು. ಅವರು, ಈಗ ಇದ್ದ ರೀತಿಯಲ್ಲಿ ಪೋರ್ಟ್‌ನ್ನು ಕಟ್ಟಿದರೆ ಅದು ವ್ಯರ್ಥವಾಗುತ್ತದೆ, ಅವರ ಹಡಗು ಬರುವುದಕ್ಕೆ ಆಗುವುದಿಲ್ಲವೆಂದು ಹೇಳಿರುವದರಿಂದ, ಎರಡನೇ ಸ್ಟೇಜಿನವರಾದರೂ ಆ ರೀತಿ ಆಳವಡಿಸಿಕೊಂಡು ಕಟ್ಟುವುದಕ್ಕೆ ಕೇಂದ್ರ ಸರ್ಕಾರದವರಲ್ಲಿ ವ್ಯವಹಾರ ಮಾಡಿ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಈಗ ತೆಗೆದುಕೊಂಡಿರುವುದು ವ್ಯರ್ಥವೇನೂ ಆಗುವುದಿಲ್ಲ. ತಾವು ಹೇಳಿದಂತೆ ನಾವು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಎರಡನೇ ಸ್ಟೇಜ್ ಜಾಗ್ರತೆಯಾಗಿ ತೆಗೆದುಕೊಳ್ಳಬೇಕೆಂದಿದೆ.

Sri D. B. KALAMANKAR.—Do you agree that the first phase of 30 feet draft is going to be a waste.

Sri H. C. LINGA REDDY.—It cannot be a waste.

ಶ್ರೀ ಎಂ. ನಾಗಪ್ಪ.—ಈ ಸೆಕೆಂಡ್ ಸ್ಟೇಜ್ ಎಸ್ಟಿಮೇಟೆಡ್ ಕಾಸ್ಟ್ ಏನು ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಇನ್ನೂ ಎಸ್ಟಿಮೇಟ್ ಆಗಿಲ್ಲ. ಸುಮಾರು 15 ಕೋಟಿ ಆಗ ಬಹುದು. ಇನ್ನೂ ಡಿಟೈಲ್ ಎಸ್ಟಿಮೇಟ್ ಆಗಬೇಕಾಗಿದೆ.

ಶ್ರೀ ಬಿ. ಎಂ. ಇದ್ದಿನಬ್ಬ.—1972ನೇ ಇಸವಿಯೊಳಗೆ ಕುದುರೆಮುಖದ ಅದುರಿನ ಕೆಲಸ ಆರಂಭವಾಗಬೇಕೆಂಬ ಒಪ್ಪಂದ ಇರುವುದರಿಂದ, ಅದರೊಳಗೆ ಬಂದರಿನ ಕೆಲಸ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಇತ್ತೀಚೆಗೆ ಮುಖ್ಯಮಂತ್ರಿ ಹಾಗೂ ನಾನು ಕೂಡ ಅಲ್ಲಿ ಹೋಗಿದ್ದೇವೆ. ಕೆಲಸ ಬಹಳ ಭರದಿಂದ ಸಾಗುತ್ತಿದೆ. ಈ ವರ್ಷ ಮೂರು ಕೋಟಿ ಕೊಟ್ಟಿದ್ದಾರೆ. ಮುಂದಿನ ವರ್ಷ 6 ಕೋಟಿಗಿಂತಲೂ ಹೆಚ್ಚಾಗಿ ಕೊಡಬೇಕೆಂದು ಕೇಳಿದ್ದೇವೆ. ಅದು ದೊರಕಬಹುದೆಂದು ತಿಳಿಯುತ್ತೇನೆ.

## Construction of a Bridge near Kattalli and Kudalakuppe Villages

66. Sri M. K. BOMMEGOWDA (K. R. Pet).—

Will the Minister for Public Works be pleased to state: —

(*a*) whether any representation have been received from the public for the construction of a bridge across Hemavathi river in Kattalli and Kudalakuppe villages, K. R. Pet taluk;

(*b*) if so, the action taken by Government for the construction of the bridge ?

Sri BASAVARAJ MAGAVI (Deputy Minister for Public Works).—

(*a*) Yes.

(*b*) This is being examined.

ಶ್ರೀ ಎಂ. ಕೆ. ಬೊಮ್ಮೇಗೌಡ.—ಇದರಲ್ಲಿ ಮನವಿ ಬಂದಿದೆಯೇ ಎಂದು ಕೇಳಿದರೆ, ಬಂದಿದೆ ಎಂದು ಹೇಳಿದ್ದೀರಿ. ಮನವಿ ಬಂದು ಎಷ್ಟು ವರ್ಷವಾಯಿತು ?

†ಶ್ರೀ ಬಸವರಾಜ ಮಾಗಾವಿ.—24-12-68ಕ್ಕೆ ಒಂದು ಮನವಿ ಬಂದಿದೆ, 24-1-69ಕ್ಕೆ ಒಂದು ಬಂದಿದೆ; ಮತ್ತು 24-3-69ಕ್ಕೆ ಒಂದು ಮನವಿ ಬಂದಿದೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಮನವಿಗಳು ಬಂದಿವೆ ಎಂದು ಹೇಳಿದ ಸಾರಿ ಕೂಡ ಇದೇ ರೀತಿ ಹೇಳಿದ್ದೀರಿ. ಈಗಲೂ ಅದನ್ನು ಮುಂದುವರಿಸಿಕೊಂಡು ಹೋಗುತ್ತೀರಿ. ಎಷ್ಟು ವರ್ಷದ ತನಕ ಈ ರೀತಿ ಹೋಗುತ್ತದೆ ಸ್ವಾಮಿ ?

ಶ್ರೀ ಬನವರಾಜ ಮಾಗಾವಿ.—ಮನವಿ ಬಂದುದನ್ನು ನಾವು ಒಪ್ಪಿಕೊಂಡಿದ್ದೇವೆ. ಮುಖ್ಯವಾಗಿ ತೊಂದರೆ ಬಂದಿರುವುದು ಕೂಡಲಕುಪ್ಪೆ ಗ್ರಾಮಗಳ ಬಳಿ ಸೇತುವೆ ಕಟ್ಟಬೇಕಾದರೆ ಅದಕ್ಕೆ 34 ಲಕ್ಷ ರೂಪಾಯಿ ವೆಚ್ಚವಾಗುತ್ತದೆ. ಅಲ್ಲಿ ಕೆ. ಆರ್. ಎಸ್. ನೀರು ಬರುವುದರಿಂದ ಇಂತಹ ದಾರಿ ವೆಚ್ಚದ ಸೇತುವೆಯಾಗಬೇಕಾಗಿದೆ. ಆದ್ದರಿಂದ ಅದನ್ನು ಕಡಿಮೆ ಮಾಡುವಂತೆ ಬೇರೆ ಅಲ್ಟರ್ನೇಟಿವ್ ಸೈಟ್ ಒಂದನ್ನು ಎಗ್ಸಾಮಿನ್ ಮಾಡುತ್ತಿದ್ದಾರೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಕೊಡಲಕುಪ್ಪೆ ಫೀಸಿಬಲ್ ಆಗುತ್ತದೆ ಎಂದು ಎಸ್ಟಿಮೇಟ್ ಬಂದಿಲ್ಲವೆ ?

ಶ್ರೀ ಬನವರಾಜ ಮಾಗಾವಿ.—ಎಸ್ಟಿಮೇಟಿಗೆ 36 ಲಕ್ಷ ರೂಪಾಯಿ ಅಂದಾಜು ಆಗುತ್ತದೆ. ಆದ್ದರಿಂದ ಅದನ್ನು ಬದಲಾವಣೆ ಮಾಡಿ ಬೇರೆ ಸೈಟ್ ನೋಡಿದರೆ ಸರ್ಕಾರಕ್ಕೆ ಉಳಿತಾಯ ವಾಗುತ್ತದೆ. ಅದನ್ನು ಮಾಡಬೇಕಾಗಿದೆ.

ಶ್ರೀ ಎಂ. ಕೆ. ಬೊಮ್ಮೇಗೌಡ. —ಎಷ್ಟು ಸಮಯವಾಗಬಹುದು ಇದಕ್ಕೆ ?

ಶ್ರೀ ಬನವರಾಜ ಮಾಗಾವಿ.—ಪರಿಶೀಲನೆ ಸಾಕಷ್ಟು ಮುಗಿಸಿದ್ದಾರೆ. ಸರ್ಕಾರಕ್ಕೆ 36 ಲಕ್ಷ ರೂಪಾಯಿ ಒದಗಿಸುವುದು ಬಹಳ ಕಷ್ಟ. ಅದಕ್ಕೆ ಸ್ವಲ್ಪ ಹಣದ ಅಭಾವ ಹೋದಮೇಲೆ ಅದನ್ನು ವಿಚಾರ ಮಾಡಲಾಗುತ್ತದೆ.

## Inclusion of Upparahally and Albettikerepalya in Tumkur Town Limits

**117. Sri B. P. GANGADHAR** (Tumkur).—

Will the Minister of State for Municipal Administration be pleased to state :—

(*a*) whether there has been a long-standing agitation to include the villages "Upparahally and Albettikerepalya" within Tumkur Town limits;

(*b*) whether the town Municipality, Tumkur and the Local Legislative Representatives have been demanding for an immediate action by the Government to include the said villages in the limits of Tumkur Town ;

(*c*) the action taken by the Government in the matter ;

(*d*) if no action has been taken, the reason for the delay ?

**Sri B. M. PATIL** (Minister of State for Municipal Administration).—

(*a*) Yes.

(*b*) Yes.

(*c*) The matter has been dropped till 1971 Census as per Circular instructions of Government of India.

(*d*) Does not arise in view of reply to clause (*c*).

ಶ್ರೀ ಬಿ. ಪಿ. ಗಂಗಾಧರ್.—ಕೇಂದ್ರಸರ್ಕಾರದವರು ಸರ್ಕಾರ್ ಇನ್ಸ್ಟ್ರಕ್ಷನ್ಸ್ ಕಳಿಸಿದ್ದಾರೆ ಎಂದು ಹೇಳಿದ್ದೀರಿ, ಅದು ಯಾವುದು ಸ್ವಾಮಿ?